ಕಥೆ

# ಕಣ್ಣಾ ಮುಚ್ಚೇ ಕಾಡೇ ಗೂಡೇ



**ಮಧುರಾ ಕರ್ಣಮ್**

ಕಲೆ: ವಿಶ್ವನಾಥ್ ಎ.ಎಸ್.

ಬಿರು ಬಿಸಿಲಿಗೆ ಕಾದಿದ್ದ ಮಣ್ಣು ಮೊದಲ ಮಳೆ ಬೀಳುತ್ತಿದ್ದಂತೆ ಇನಿಯನ ಮಿಲನವಾಯಿತೆಂದು ತಂಪಾಯಿತು. ಮಿಲನದ ಘಮಲು ಎಲ್ಲೆಡೆ ಪಸರಿಸಿತು. ಹಿತವಾದ ಸುಗಂಧವನ್ನು ಮೂಗು ಆಘ್ರಾಣಿಸುತ್ತಿದ್ದರೂ ಅದರ ಪರಿವೆಯೇ ಇಲ್ಲದಂತೆ ನಂಜುಡ ಸಾಗಿದ್ದ. 'ದುಡ್ಡು ಬೇಕು ಕನಪ್ಪ. ಪರೀಕ್ಷೆಯ ಫೀಸ್ ಕಟ್ಟಬೇಕು. ಒಂದ್ಯೆನೂರಾದರೂ ಬೇಕು'ಎಂದಿದ್ದ ಮಗ. 'ಎಲ್ಲಿಂದ ತರುವುದು? ತನ್ನ ಬಳಿ ಈಗ ಚಿಕ್ಕಾಸೂ ಇಲ್ಲ. ಹತ್ತೊ... ಇಪ್ಪತ್ತೋ ಆದರೆ ಹೇಗೋ ಮಾಡಬಹುದು. ಐನೂರು.. ಅಂದರೆ ಹೊಂದಿಸಲು ಸಾಧ್ಯವೇ ಇಲ್ಲ. ದುಡ್ಡು ಕೊಡುವವರಾರು?' ಎಂಬ ಪ್ರಶ್ನೆಗಳು ತಲೆಯಲ್ಲಿ ಗಿರಕಿ ಹೊಡೆಯುತ್ತಿದ್ದಂತೆ ಹಿಂದಿನಿಂದ ದೇವಪ್ಪ, 'ನಂಜುಂಡಾ.. ಓ.. ನಂಜುಂಡಾ' ಎಂದು ಕೂಗಿದ್ದು ಕೇಳಲೇ ಇಲ್ಲ. ಓಡಿ ಬಂದು ಬೆನ್ನ ಮೇಲೆ ಒಂದೇಟು ಕೊಟ್ಟು, 'ಏಟು ಕೂಗಬೇಕು ನಿಂಗೆ?'ಎಂದಾಗಲೇ ಬಾಹ್ಯ ಪ್ರಪಂಚಕ್ಕೆ ಮರಳಿದನವ. 'ಹೆ.. ಗ್ಯಾನ ಎಲ್ಲೋ ಇತ್ತು ಕಣ್ಲಾ. ಗೊತ್ತಾಗ್ಲಿಲ್ಲ'ಎಂದು ನಕ್ಕ. 'ಅಂತಾದ್ದೇನ್ ಯೋಚನೆ ಮಾಡ್ತಾ ಇದ್ದೆ ಕನಪ್ಪ. ಕೂಗಿದ್ರೆ ಕೇಳ್ದೇ ಇರೋವಂತದ್ದು.. ತಲೆ ಹೋಗೋವಂತದ್ದು'ಎಂದು ಹೆಗಲ ಮೇಲೆ ಕೈ ಹಾಕಿ ಸಲಿಗೆಯಿಂದಲೇ ಕೇಳಿದ. ಎಷ್ಟಾದರೂ ಬಾಲ್ಯದ ಗೆಳೆಯರಲ್ಲವೆ? 'ಅದೇ ಕನಪ್ಪಾ. ನನ್ಮಗ ಬಸನಿಂಗ ಪರೀಕ್ಷೆ ಕಟ್ಟವ್ನೆ. ಅದಕ್ಕೆ ಫೀಸು ಐನೂರು ಬೇಕಂತ ಹೇಳವ್ನೆ. ಮಾದೇವಿ 'ನನ್ತಾವ ಇಲ್ಲ. ಈ ಸಲಿ ನೀನೇ ಎಂಗಾದ್ರೂ ಹೊಂದ್ಸು'ಅಂದ್ಲು. ಪ್ರತಿ ಸರ್ತಿ ಅವಳೇ ಕೊಡೋಳು. ಮೇಸ್ತ್ರಿ ಕೆಲಸಕ್ಕೂ ಕರೀತಾ ಇಲ್ಲ. ಯಾವಾಗ ಕರಕೊಂಡೋಯ್ತಾನೋ ದೇವರೇ ಬಲ್ಲ. ಗೌಡ್ರದು ಹಳೆ ಬಾಕಿನೇ ಕೊಟ್ಟಿಲ್ಲ. ಎಂಗ್ ಕೇಳ್ಲಿ? ಶೆಟ್ರುದು ಮೀಟರ್ ಬಡ್ಡಿ ಲೆಕ್ಕ. ಬಡ್ಡಿ ಕಟ್ಟಕ್ಕೆ ನನ್ಕೈಲಾಗಲ್ಲ.. ಇನ್ಯಾರವ್ರೆ? ಅದಕ್ಕೆ ಎಂಗ್ಮಾಡ್ಲಿ ಅಂತ ಯೋಚ್ನೆ' ಎಂದು ತಲೆ ಕೆರೆದುಕೊಂಡ. ದೇವಪ್ಪ ಮುಂದುವರೆದು, 'ಹೌದು ಕಣ್ಲಾ, ನಂಗೂ ಐನೂರು ಬೇಕಿತ್ತು. ಅಪ್ಪಂಗೆ ಅದ್ಯಾವ್ದೋ ಔಸಧಿ ಯೋಳವ್ರೆ. ಅದಕ್ಕೆ ಐನೂರ್ ರುಪಾಯಂತೆ. ಅವ್ವ ದಿನಾ 'ತಂದ್ಯಾ? ತಂದ್ಯಾ?'ಅಂತ